ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೨೯ನೇ ಮಾರ್ಚ್ ೧೯೯೦, ಚೈತ್ರ ೮, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು].

ಚೆಂಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೈಲಹೊಂಗಲ ತಾಲ್ಲೂಕಿನ ತಿಗಡಿ ಹರಿನಾಲಾ ಯೋಜನೆಯ ಬಗೆ .

೩೩೪. ಶ್ರೀ **ಬಾಬಾಗೌಡ** ಆರ್. ಪಾಟೀಲ್ (ಕಿತ್ತೂರು)—ಮಾನ್ಯ ನೀರಾವರಿ ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಮಾರು ವರ್ಷಗಳ ಹಿಂದೆಯೇ ಯೋಜಿಸಿದ್ದ ತಿಗಡಿ ಹರಿನಾಲಾ ಯೋಜನೆಯನ್ನು ಸರ್ಕಾರದವರು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳುವರೆ.

ಶ್ರೀ ಜಿ. **ಪುಟ್ಟಸ್ವಾಮಿಗೌಡ** (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬೆಲೆಬಾಳುವ ನೀರಾವರಿ ಆಗುತ್ತಿರುವ ಜಮೀನುಗಳು ಈ ಯೋಜನೆಯಿಂದ ಮುಳುಗಡೆ ಆಗುವುದೆಂದು ಮನವಿಗಳು ಬಂದುದರಿಂದ ಈ ಯೋಜನೆಯನ್ನ ಸ್ಥಗಿತಗೊಳಿಸಲಾಗಿದೆ. ಬದಲಿ ಪ್ರಸ್ತಾವಗಳು ಪರಿಶೀಲನೆಯಲ್ಲಿವೆ.

ಶ್ರೀ ಬಾಬಾಗೌಡ ಆರ್. ಪಾಟೀಲ್.—ಈ ವರ್ಷ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ — ಈ ತಿಗಡಿ ಹರಿನಾಲಾ ಯೋಜನೆಯನ್ನು ಕೈಬಿಟ್ಟಿದ್ದೇವೆ. ಆದಕ್ಕೆ ಪೂರಕವಾಗಿ ೬ ಸಣ್ಣ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಇವುಗಳನ್ನು ನಾವು ಇನ್‌ವೆಸ್ಟಿಗೇಟ್ ಮಾಡಿಸುತ್ತಿದ್ದೇವೆ. ಕರಡು ಯೋಜನೆ ತಯಾರು ಆದನಂತರ ಅದು ಸರ್ಕಾರದ ಪರಿಶೀಲನೆಗೆ ಬಂದನಂತರ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಉದ್ದೇಶಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

೪೧೦ ಶ್ರೀ ಸಿ. ಎಸ್. ನಾಡಗೌಡ (ಮುದ್ದೇಬಿಹಾಳ)—ಮಾನ್ಯ ನೀರಾವರಿ ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯು ಬರಗಾಲಕ್ಕೆ ತುತ್ತಾಗಿರುವ ಪ್ರದೇಶವೆಂಬುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಪ್ರದೇಶದ ಜಮೀನುಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರೊದಗಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಇ) ಮಂಗಳಂವಾಡ ನೀರಾವರಿ ಯೋಜನೆಯನ್ನು ನಿರ್ಮಿಸಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು)—

ಅ) ಅಲ್ಲ.

ಆ) ೩೦ ಏತ ನೀರಾವರಿ ಯೋಜನೆಗಳು ಈ ಜಿಲ್ಲೆಯಲ್ಲಿ ಕಾರ್ಯಾಚರಣೆಯಲ್ಲಿದ್ದು ಇವುಗಳಿಂದ ೭೯೫೫ ಹೆಕ್ಟೇರು ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಇದಲ್ಲದೆ ೩ ಏತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಇ) ಮುಂಗಾರಿನ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ೨ನೇ ಘಟ್ಟದಲ್ಲಿ ಸೇರಿದ್ದು ಎರಡನೇ ಘಟ್ಟವು ಅನ್ವೇಷಣಾ ಹಂತದಲ್ಲಿದೆ.

ಶ್ರೀ ಸಿ.ಎಸ್. ನಾಡಗೌಡ.—ಬಿಜಾಪುರ ಜಿಲ್ಲೆ ಬರಗಾಲಪೀಡಿತಪ್ರದೇಶ ಅಲ್ಲ ಎಂದು ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ. ಬಿಜಾಪುರ ಜಿಲ್ಲೆ ೧೯೮೩ರಿಂದ ಹಿಡಿದು ೧೯೮೮ರವರೆಗೆ ಸತತವಾಗಿ ಮೂರು ಸಲ ಬರಗಾಲದಲ್ಲಿ ಬಿದ್ದಿದೆ. ಆದೂ ಅಲ್ಲದೆ, ತಾವು ೩೦ ಏತ ನೀರಾವರಿ ಯೋಜನೆಗಳನ್ನು ಈ ಜಿಲ್ಲೆಯಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಆದರೆ ಅಲ್ಲಿಯ ಏತ ನೀರಾವರಿ ಬಗ್ಗೆ ತಾವು ಯಾವ ಒಂದು ಕೋಆಪರೇಷನ್ ಮಾಡಿದ್ದೀರಿ ಅದನ್ನು ವೈಂಡ್‌ಅಪ್ ಮಾಡುತ್ತಿದ್ದೀರಿ ಎಂದು ತಿಳಿದುಬಂದಿದೆ. ಅದು ನಿಜವೋ ಹೇಗೆ? ಅದೂ ಅಲ್ಲದೆ, ನಾರಾಯಣಪುರ ಜಲಾಶಯದಲ್ಲಿ ಮುಳುಗಡೆ ಯಾಗುವಂಥ ಪ್ರದೇಶದ ಬಗ್ಗೆ ಹೆಳಬೇಕೆಂದರೆ, ರೀಹ್ಯಾಬಲಿಟೇಷನ್ ಎನ್ನುವ ಅರ್ಥ ಕೇವಲ ಅವರಿಗೆ ಪುನರ್‌ವಸತಿ ಅಥವಾ ನೀರಾವರಿ ಸೌಕರ್ಯ ಆಗಲಿ, ಕುಡಿಯುವ ನೀರಿನ ಸೌಕರ್ಯವಾಗಲಿ ಮಾಡಿದರೆ ಮಾತ್ರ ರೀಹ್ಯಾಬಲಿಟೇಷನ್ ಆಗುವುದಿಲ್ಲ. ಆಲ್ಲಿ ಯಾವುದಾದರೂ ಏತನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೋ ಹೇಗೆ ಮೂರನೆಯದಾಗಿ, ಮುಳುಗುವಾಡ ಏತನೀರಾವರಿ ಬಗ್ಗೆ, ಹೋದ ಸರ್ಕಾರ ಅಡಿಗಲ್ಲು ಹಾಕಿ ಈ ಏತ ನೀರಾವರಿ ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದರು. ಆ ಹೇಳಿಕೆ ಕೂಡ ತಮ್ಮದೂ ಆಗಬಾರದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಬಗ್ಗೆ ತಾವು ಸ್ಪಷ್ಟವಾದ ನಿಲುವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು. ಬಿಜಾಪುರ ಜಿಲ್ಲೆ ಬರಗಾಲಕ್ಕೆ ತುತ್ತಾಗಿರುವ ಪ್ರದೇಶ ಎಂಬುದು ನಿಜವಲ್ಲವೇ ಎಂದು. ಅದು ಬರಗಾಲಕ್ಕೆ ತುತ್ತಾಗಿಲ್ಲ ಎನ್ನತಕ್ಕದ್ದು ಜಿಲ್ಲಾಧಿಕಾರಿಯಿಂದ ಬಂದಿರತಕ್ಕ ವರದಿ. ಬರಗಾಲಕ್ಕೆ ತುತ್ತಾಗಿರತಕ್ಕಂಥಾದ್ದು ಅಂದರೆ ಫ್ಯಾಮಿನ್ ಅಫೆಕ್ಟೆಡ್ ಏರಿಯಾಸ್, ಫ್ಯಾಮಿನ್ ಸ್ಟ್ರಿಕನ್ ಏರಿಯಾಸ್ ಅಂದರೆ ಬರಗಾಲ ಪೀಡಿತ ಪ್ರದೇಶ ಎಂದು ಅರ್ಥೈಸುವಾಗ ನೋಡಿ ತಿಳಿದುಕೊಳ್ಳಬೇಕು. ಬರಗಾಲಪೀಡಿತ ಪ್ರದೇಶ ಎನ್ನತಕ್ಕದ್ದರಲ್ಲಿ, ನಮ್ಮ ಎರಡನೆಯ ವಿವಾದ ಇಲ್ಲ. ಬರಗಾಲಕ್ಕೆ ತುತ್ತಾಗಿರುವ ಪ್ರದೇಶ ಅಂದರೆ ಇಲ್ಲಿ ಎಂದು ಹೇಳಬೇಕಾಗುತ್ತದೆ. ಅದಕ್ಕೆ ತನ್ನದೇ ಆದಂಥ ನಾರ್ಮ್ಸ್ ಇರುತ್ತದೆ. ಜಿಲ್ಲಾಧಿಕಾರಿಯಿಂದ ಬಂದಿರುವ ವರದಿಯ ಪ್ರಕಾರ ಅದು ಬರಗಾಲಕ್ಕೆ ತುತ್ತಾಗಿದೆ ಎನ್ನುವ ಡೆಫಿನಿಷನ್‌ನಲ್ಲಿ ಬರುವುದಿಲ್ಲ ಎಂದು ಹೇಳುತ್ತೇನೆ. ಮತ್ತೆ ೩೦ ಏತನೀರಾವರಿ ಯೋಜನೆಗಳು ಈಗಾಗಲೇ ಅಲ್ಲಿ ಕಾರ್ಯಾಚರಣೆಯಲ್ಲಿವೆ. ಮತ್ತೆ ಮೂರು ಯೋಜನೆಗಳು ಕೃಷ್ಣ ಬೇಸಿನ್ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ಇವೆ. ಈಗಾಗಲೇ ಅವುಗಳನ್ನು ಕೈಗೆತ್ತಿಕೊಂಡು ಟೆಂಡರ್ ಕೂಡ ಕರೆದಿದ್ದೇವೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಮಗೆ ಗೊತ್ತಿದೆ, ಈ ಏತನೀರಾವರಿ ಯೋಜನೆಯಲ್ಲಿ ರೈತರು ಶೇಕಡಾ ೧೫ರಷ್ಟು ಹಣವನ್ನು ಕೊಡಬೇಕೆನ್ನುವ ನಿಯಮ ಕಡ್ಡಾಯವಾಗಿ ಇದ್ದುದರಿಂದ, ಅವನ್ನು ಹಿಂದಿನ ಸರ್ಕಾರ ಗಣನೆಗೆ ತೆಗೆದುಕೊಳ್ಳದೆ ಆ ಯೋಜನೆಗಳನ್ನು ಮಾಡಬೇಕು ಎನ್ನತಕ್ಕ ನಿರ್ಧಾರ ತೆಗೆದುಕೊಂಡಿದ್ದರ ಪರಿಣಾಮವಾಗಿ ನಾವು ಅವನ್ನು ಮುಂದುವರಿಸಿದ್ದೇವೆ. ಆದರೂ ಆ ಪರತ್ತು ಹಾಕಿದ್ದೇವೆ. ಆದಷ್ಟು ಬೇಗ ರೈತರು ಆ ಹಣವನ್ನು ತುಂಬಿ ಆ ಯೋಜನೆಗಳನ್ನು ಬೇಗ ಪೂರ್ತಿ ಮಾಡಲಿಕ್ಕೆ ಆಗುತ್ತದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಎಸ್. ನಾಡಗೌಡ.—೧೫ ಪರ್‌ಸೆಂಟ್ ರೈತರು ತುಂಬಬೇಕಾಗಿರುವ ಹಣ ತುಂಬಬೇಕು ಎಂದು ಹೇಳಿದ್ದೀರಿ. ಇಂಡಸ್ಟ್ರಿಯಲ್ ಸೆಕ್ಟಾರ್‌ನಲ್ಲಿ, ಬೇರೆ ಯಾವುದಾದರೂ ವಿಷಯದಲ್ಲಿ ಪೂರ್ತಿಯಾಗಿ ಹಣವನ್ನು ಸರ್ಕಾರವೇ ಒದಗಿಸಿಕೊಳ್ಳುತ್ತದೆ. ಅದೇರೀತಿ ರೈತರು ಕೊಡಬೇಕಾದ ೧೫ಪರ್‌ಸೆಂಟ್ ಹಣವನ್ನು ಸರ್ಕಾರದ ಬೊಕ್ಕಸದಿಂದ ಕೊಡುವಂಥ ಸಹಾಯಧನ ಆದರೆ ಈ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆಯವ್ಯಯ ಭಾಷಣದ ಬಗ್ಗೆ ಉತ್ತರವನ್ನು ಕೊಡುವಾಗ ತಾವು ಕೇಳಿರಬಹುದು. ರೈತರು ಕೊಡಲಿಕ್ಕೆ ಆಗದೇ ಇರತಕ್ಕಂತಹ ಸಂದರ್ಭದಲ್ಲಿ ಸರಕಾರವೇ ಅದನ್ನು ಕೈಗೆತ್ತಿಕೊಂಡು ಸರ್ಕಾರದ ಬೊಕ್ಕಸದಿಂದ ಸಹಾಯಧನ ಕೊಟ್ಟು ವಿತರಣೆ ಯೋಜನೆಯನ್ನು ಮಾಡಬೇಕೆಂದು ಕೇಳಿದ್ದಿರಿ. ಆದರೆ ಈ ಬಗ್ಗೆ ಇನ್ನೂ ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಂಡಿಲ್ಲ. ಆದುದರಿಂದ ಅದರ ಬಗ್ಗೆ ಪ್ರಶ್ನೆ ಮಾಡತಕ್ಕಂಥಾದ್ದು ಕಷ್ಟವಾಗುತ್ತದೆ. ಆಯವ್ಯಯದಲ್ಲಿ ಇಂಡಿಕೇಷನ್ ಕೊಟ್ಟ ಹಾಗೆ ತಮ್ಮ ಸಲಹೆಯನ್ನೂ ಗಮನದಲ್ಲಿಟ್ಟು ಸರಕಾರದ ವತಿಯಿಂದ ಮಾಡಿಸತಕ್ಕಂಥಾದ ಕ್ರಮ ಪ್ರಯತ್ನ ಮಾಡುತ್ತೇನೆ. ಪ್ರಶ್ನೆ ೧೩೧ (೩೩೯) ಈ ಪ್ರಶ್ನೆಯನ್ನು ಆರ್‌ಡಿಪಿಆರ್‌ಗೆ ಬದಲಾವಣೆ ಮಾಡಲಿಕ್ಕೆ ವಿನಂತಿಸಿ ತಮಗೆ ಪತ್ರ ಬರೆದಿದ್ದೇನೆ.

ಅಧ್ಯಕ್ಷರು.—ಇದನ್ನು ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳ ಇಲಾಖೆಗೆ ಟ್ರಾನ್ಸ್‌ಫರ್ ಮಾಡಲಾಗಿದೆ. ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶಿಕಾರಿಪುರ ತಾಲ್ಲೂಕಿನ ಬೆಳ್ಳಿಗಾವಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕುರಿತಂ

೧೧೨. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನ ಉಡುತಡಿ ತೊಗರ್ಸಿ ಬಂದಳಿಕೆ ಹಾಗೂ ಐತಿಹಾಸಿಕ ಸ್ಥಳ ಬೆಳ್ಳಿಗಾವಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಸರ್ಕಾರ ಗಮನ ಹರಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖಾ ಮಂತ್ರಿಗಳು).—

ಅ) ಈ ಕೇಂದ್ರಗಳನ್ನು ಈಗಾಗಲೇ ಪ್ರವಾಸಿ ಸ್ಥಳಗಳೆಂದು ಗುರುತಿಸಲಾಗಿದೆ, ಅಭಿವೃದ್ಧಿ ಪಡಿಸಲಂ ಪರಿಶೀಲಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗಾಗಲೇ ಈ ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದಂ ಗುರುತಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಉಡುತಡಿ ಸ್ಥಳವು ಅಕ್ಕ ಮಹಾದೇವಿಯವರು ಹುಟ್ಟಿದಂತಹ ಸ್ಥಳವಾಗಿದ್ದು ಬಹಳ ಪ್ರಖ್ಯಾತಿಯಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಬಹಳ ಪ್ರಖ್ಯಾತವಾದಂತಹ ಸ್ಥಳಗಳು ಇವಾಗಿವೆ. ಇವುಗಳನ್ನು ಈ ವರ್ಷವೇ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಏನಾದರೂ ಕಾರ್ಯಕ್ರಮ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ —ಸನ್ಮಾನ್ಯ ಸದಸ್ಯರು ಕೆಲವು ಪ್ರವಾಸಿ ಸ್ಥಳಗಳನ್ನು ಹೇಳಿದ್ದಾರೆ. ಅದರಲ್ಲಿ ಉಡುತಡಿ ಕ್ಷೇತ್ರ ಅಕ್ಕ ಮಹಾದೇವಿಯವರು ಹುಟ್ಟಿದಂತಹ ಸ್ಥಳವೆಂದು ಹೇಳುತ್ತಿದ್ದಾರೆ. ಇದರ ಪ್ರಖ್ಯಾತಿಯನ್ನು ಕಂಡುಕೊಂಡು ಇದನ್ನು ಪ್ರವಾಸಿ ಸ್ಥಳವೆಂದು ಗುರುತಿಸಿದ್ದೇವೆ. ಮಾನ್ಯ ಸದಸ್ಯರು ಬಯಸಿದಂತೆ ಬರುವ ವರ್ಷ ಈ ಬಗ್ಗೆ ಕಾರ್ಯಕ್ರಮವನ್ನು ರೂಪಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕೇಂದ್ರ ಸರಕಾರ ಅಲ್ಲಿರುವಂತಹ ಹಳೆಯ ಮಾನ್ಯುಮೇಂಟ್ಸ್ ಅನ್ನು ಬಹಳ ಒಳ್ಳೆಯದಿದೆ ಎಂದು ಪ್ರಿಸರ್ವ್ ಮಾಡುವ ದೃಷ್ಟಿಯಿಂದ ತನ್ನ ವಶಕ್ಕೆ ತೆಗೆದುಕೊಂಡಿದೆ ಕೊನೇ ಪಕ್ಷ ಇಲ್ಲಿ ಮುಂದಿನ ವರ್ಷವಾದರೂ ಅಲ್ಲಿ ಗೆಸ್ಟ್ ಹೌಸ್ ಅನ್ನು ಮಾಡಿದರೆ ಯಾರಾದರೂ ಅಲ್ಲಿಗೆ ಭೇಟಿ ನೀಡಿದರೆ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ಕಾರ್ಯಕ್ರಮವನ್ನು ರೂಪುಗೊಳಿಸಲಿಕ್ಕೆ ಪ್ರವಾಸೋದ್ಯಮ ಇಲಾಖೆ ಬೇಕಾದ ಎಲ್ಲಾ ಪ್ರಯತ್ನಗಳನ್ನು ಬರುವ ವರ್ಷ ಮಾಡುತ್ತದೆ. ಇಷ್ಟರವರೆಗೆ ಇವುಗಳನ್ನು ಪ್ರವಾಸಿ ಸ್ಥಳಗಳೆಂದು ಗುರುತಿಸಿದ್ದಾರೆಯೇ ಹೊರತು ಏನು ಮಾಡಬೇಕೆಂಬ ಬಗ್ಗೆ ರೂಪುರೇಷೆಯನ್ನು ರೂಪಿಸಿಲ್ಲ. ಈಗಾಗಲೇ ನಮ್ಮ ಅಧಿಕಾರಿಗಳು ಅದಕ್ಕೆ ಬೇಕಾದಂತಹ ಮತ್ತು ಇದನ್ನು ಯಾವ ತರಹ ಮಾಡಲಿಕ್ಕೆ ಸಾಧ್ಯ ಇದೆ ಎಂಬ ಬಗ್ಗೆ ರೂಪುರೇಷೆಯನ್ನು ತಯಾರು ಮಾಡುತ್ತಾರೆ. ಬಜೆಟ್‌ನಲ್ಲಿ ಈ ಕಾರ್ಯಕ್ರಮವನ್ನು ಸೇರಿಸಿಲ್ಲ. ಜಪಾನ್ ಸಂಯೋಗದಿಂದ ತೆಗೆದುಕೊಂಡಿರುವ ಕಾರ್ಯಕ್ರಮ ಏನು ಇದೆ ಅದರಲ್ಲಿ ಇದನ್ನೂ ಸೇರಿಸುವುದಕ್ಕೆ ಆಗುವುದಿದ್ದರೆ ಸೇರಿಸೋಣ.